**Online Newspaper Clipping Service**

**Dtd-Saturday, 5th, August 2023**

ಕೋಲಾರಪತ್ರಿಕೆ

**Page No.01**

# ಜಾಲಪ್ಪ ಆಸ್ಪತ್ರೆಯಲ್ಲಿ ವಿಶ್ವ ಓಆರ್‌ಎಸ್ ದಿನಾಚರಣೆ




ಕೋಲಾರ ಆ ೪– ಓಆರ್‌ಎಸ್ ಎಂಬುದು ಮಕ್ಕಳಿಗೆ ಸಂಜೀವಿನಿ ಇದ್ದ ಹಾಗೆ. ಮಕ್ಕಳಿಗೆ ವಾಂತಿ ಮತ್ತು ಬೇದಿ ಆದಾಗ ಈ ದ್ರವ್ಯವು ಬಹಳ ಉಪಯುಕ್ತವಾಗಿ ಕೆಲಸ ಮಾಡುತ್ತದೆ ಎಂದು ಆರ್.ಎಲ್.ಜಾಲಪ್ಪ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ॥ ಜೆ.ಕೃಷ್ಣಪ್ಪ ಹೇಳಿದರು.

ನಗರದ ಹೊರವಲಯದ ಆರ್.ಎಲ್.ಜಾಲಪ್ಪ ಆಸ್ಪತ್ರೆಯ ಆವರಣದಲ್ಲಿ ಮಕ್ಕಳ ವಿಭಾಗ ಹಮ್ಮಿಕೊಂಡಿದ್ದ ವಿಶ್ವ ಓಆರ್‌ಎಸ್ ದಿನಾಚರಣೆಯಲ್ಲಿ ಮಾತನಾಡಿದ ಅವರು, ಓಆರ್‌ಎಸ್ ಎಂಬುದು ಅನೇಕ ಮಕ್ಕಳಿಗೆ ಜೀವದಾನ ಮಾಡಿದೆ ಎಂದು ತಿಳಿಸಿದರು.

ಮಕ್ಕಳ ವಿಭಾಗದ ಮುಖ್ಯಸ್ಥೆ ಡಾ॥ಸುಧಾರೆಡ್ಡಿ ಓಆರ್‌ಎಸ್ ದ್ರಾವಕ ತಯಾರಿ ಮಾಡಿಕೊಳ್ಳುವ ಸುಲಭ ವಿಧಾನವನ್ನು ತಿಳಿಸಿಕೊಟ್ಟರು.

ಉಪ ವೈದ್ಯಕೀಯ ಅಧೀಕ್ಷಕ ಡಾ॥ ಕೆ.ದಿನೇಶ್ ಮಾತನಾಡಿ ಮೂಢನಂಬಿಕೆಗಳಿಗೆ ಕಿವಿಗೊಡದೆ ಪೋಷಕರು ಸರಿಯಾದ ಸಮಯದಲ್ಲಿ ಓಆರ್‌ಎಸ್ ಅನ್ನು ಮಕ್ಕಳಿಗೆ ಕೊಡುವುದರಿಂದ ಅನೇಕ ಜೀವಗಳನ್ನು ಉಳಿಸಬಹುದು ಎಂದು ಸಲಹೆ ನೀಡಿದರು.

ಮಕ್ಕಳ ವಿಭಾಗದ ಡಾ॥ನರೇಂದ್ರ ಮಾತನಾಡಿ ಓಆರ್‌ಎಸ್ ಪುಡಿಯು ಎಲ್ಲಾ ಔಷಧಾಲಯಗಳಲ್ಲಿ ತುಂಬ ಕಡಮೆ ದರದಲ್ಲಿ ದೊರೆಯುತ್ತದೆ ಎಂದು ತಿಳಿಸಿದರು.

ಸಮುದಾಯ ವಿಭಾಗದ ಮುಖ್ಯಸ್ಥ ಡಾ॥ ಪ್ರಸನ್ನಕಾಮತ್ ಮಾತನಾಡಿ, ಮಕ್ಕಳಿಗೆ ಸರಿಯಾದ ಸಮಯದಲ್ಲಿ ನಿಗದಿತ ಚುಚ್ಚುಮದ್ದುಗಳನ್ನು ಕಡ್ಡಾಯವಾಗಿ ಕೊಡಿಸುವುದರಿಂದ ಅನೇಕ ಕಾಯಿಲೆಗಳನ್ನು ಮಕ್ಕಳಲ್ಲಿ ತಡೆಗಟ್ಟಬಹುದೆಂದು ಹೇಳಿದರು.

ಡಾ॥ ವರ್ಷ ನಿರೂಪಿಸಿದ ಕಾರ್ಯಕ್ರಮದಲ್ಲಿ ಮಕ್ಕಳ ವಿಭಾಗದ ಎಲ್ಲಾ ವೈದ್ಯರು, ಆಸ್ಪತ್ರೆಯ ನರ್ಸಿಂಗ್ ವಿಭಾಗದ ಜಪಮಣಿ ಮತ್ತು ಅವರ ತಂಡದವರು ಉಪಸ್ಥಿತರಿದ್ದರು.

ಕೋಲಾರ ತುಮಕೂರು ಚಿಕ್ಕಬಳ್ಳಾಪುರ
ವಾಣಿ



# ಆರ್.ಎಲ್.ಜಾಲಪ್ಪ ಆಸ್ಪತ್ರೆಯಲ್ಲಿ 'ವಿಶ್ವ ಒಆರ್‌ಎಸ್' ದಿನಾಚರಣೆ

ಕೋಲಾರ

ಒಆರ್‌ಎಸ್ ಎಂಬುದು ಮಕ್ಕಳಿಗೆ ಸಂಜೀವಿನಿ ಇದ್ದ ಹಾಗೆ. ಮಕ್ಕಳಿಗೆ ವಾಂತಿ ಮತ್ತು ಬೇದಿ ಆದಾಗ ಈ ಒಆರ್‌ಎಸ್ ಎಂಬ ದ್ರವ್ಯವು ಬಹಳ ಉಪಯುಕ್ತವಾಗಿ ಕೆಲಸ ಮಾಡುತ್ತದೆ ಎಂದು ಆರ್.ಎಲ್.ಜಾಲಪ್ಪ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಜೆ.ಕೃಷ್ಣಪ್ಪ ಹೇಳಿದರು.

ನಗರದ ಹೊರವಲಯದ ಆರ್.ಎಲ್.ಜಾಲಪ್ಪ ಆಸ್ಪತ್ರೆಯ ಆವರಣದಲ್ಲಿ ಮಕ್ಕಳ ವಿಭಾಗದಿಂದ ಹಮ್ಮಿಕೊಂಡಿದ್ದ ವಿಶ್ವ ಒಆರ್‌ಎಸ್ ದಿನಾಚರಣೆಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಒಆರ್‌ಎಸ್ ಎಂಬುದು ಅಮೃತ ಇದ್ದ ಹಾಗೆ, ಮಕ್ಕಳಿಗೆ ವಾಂತಿ ಮತ್ತು ಬೇದಿ ಆದಾಗ ಈ ಒಆರ್‌ಎಸ್ ಎಂಬ ದ್ರವ್ಯವು ಬಹಳ ಉಪಯುಕ್ತವಾಗಿ ಕೆಲಸ ಮಾಡುತ್ತದೆ ಮತ್ತು ಅನೇಕ ಮಕ್ಕಳಿಗೆ ಜೀವದಾನವು ಆಗಿದೆ ಎಂದು ತಿಳಿಸಿದರು.



ಮಕ್ಕಳ ವಿಭಾಗದ ಮುಖ್ಯಸ್ಥರಾದ ಡಾ.ಸುಧಾರೆಡ್ಡಿ ಒಆರ್‌ಎಸ್ ದ್ರವ್ಯವನ್ನು ತಯಾರಿ ಮಾಡಿಕೊಳ್ಳುವ ಸುಲಭ ವಿಧಾನವನ್ನು ತಿಳಿಸಿಕೊಟ್ಟರು.

ಉಪ ವೈದ್ಯಕೀಯ ಅಧೀಕ್ಷಕ ಡಾ.ಕೆ.ದಿನೇಶ್ ಮಾತನಾಡಿ, ಮೂಡನಂಬಿಕೆಗಳಿಗೆ ಕಿವಿಗೊಡದೆ ಪೋಷಕರು ಸರಿಯಾದ ಸಮಯದಲ್ಲಿ ಈ ಒಆರ್‌ಎಸ್‌ನ್ನು ಮಕ್ಕಳಿಗೆ ಕೊಡುವುದರಿಂದ ಅನೇಕ ಜೀವಗಳನ್ನು ಉಳಿಸಬಹುದು ಎಂದು ಸಲಹೆ ನೀಡಿದರು.

ಪ್ರತಿ ವರ್ಷವು ಜುಲೈ 29 ರಂದು ವಿಶ್ವ ಒಆರ್‌ಎಸ್ ದಿನಾಚರಣೆಯನ್ನು ಆಚರಿಸಲಾಗುತ್ತದೆ ಎಂದು ನೆರೆದಿದ್ದ ಪೋಷಕರಿಗೆ ತಿಳಿಸಿದರು.

ಮಕ್ಕಳ ವಿಭಾಗದ ಡಾ.ನರೇಂದ್ರ ಮಾತನಾಡಿ, ಈ ಒಆರ್‌ಎಸ್ ಪುಡಿಯು ಎಲ್ಲಾ ಔಷಧಾಲಯಗಳಲ್ಲಿ ತುಂಬ ಕಡಿಮೆ ದರದಲ್ಲಿ ದೊರೆಯುತ್ತದೆ ಎಂದು ತಿಳಿಸಿದರು.

ಸಮುದಾಯ ವಿಭಾಗದ ಮುಖ್ಯಸ್ಥರಾದ ಡಾ.ಪ್ರಸನ್ನಕಾಮತ್ ಮಾತನಾಡಿ, ಮಕ್ಕಳಿಗೆ ಸರಿಯಾದ ಸಮಯದಲ್ಲಿ ನಿಗದಿತ ಚುಚ್ಚುಮದ್ದುಗಳನ್ನು ಕಡ್ಡಾಯವಾಗಿ ಕೊಡಿಸುವುದರಿಂದ ಅನೇಕ ಕಾಯಿಲೆಗಳನ್ನು ಮಕ್ಕಳಲ್ಲಿ ತಡೆಗಟ್ಟಬಹುದೆಂದು ನೆರೆದಿದ್ದ ಪೋಷಕರಿಗೆ ತಿಳುವಳಿಕೆ ನೀಡಿದರು.

ಕಾರ್ಯಕ್ರಮವನ್ನು ಡಾ.ಪರ್ಷರವರು ಅಚ್ಚುಕಟ್ಟಾಗಿ ನಿರೂಪಣೆ ಮಾಡಿದರು. ಮಕ್ಕಳ ವಿಭಾಗದ ಎಲ್ಲಾ ವೈದ್ಯರು, ಆಸ್ಪತ್ರೆಯ ನರ್ಸಿಗ್ ವಿಭಾಗದ ಸಿಸ್ಟರ್ ಜಬಮನಿ ಮತ್ತು ಅವರ ತಂಡದವರು ಉಪಸ್ಥಿತರಿದ್ದರು.

ಅನೇಕ ಪೋಷಕರು ಈ ಉತ್ತಮವಾದ ಕಾರ್ಯಕ್ರಮದ ಲಾಭವನ್ನು ಪಡೆದರು.

ಸಂಯುಕ್ತ ಕರ್ನಾಟಕ

# ಮಕ್ಕಳಿಗೆ ಒಆರ್‌ಎಸ್ ದ್ರಾವಣ ಅಮೃತಸಮಾನ



ಸಂ.ಕ ಸಮಾಚಾರ, ಕೋಲಾರ

ಆಮಶಂಕೆಯಿಂದ ನರಳುವ ಮಕ್ಕಳನ್ನು ಒಆರ್‌ಎಸ್ ಪುಡಿಯು ಅಮೃತದಂತೆ ರಕ್ಷಿಸುತ್ತದೆ ಎಂದು ಜಾಲಪ್ಪ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಜೆ.ಕೃಷ್ಣಪ್ಪ ಬಣ್ಣಿಸಿದರು.

ಆಸ್ಪತ್ರೆಯ ಮಕ್ಕಳ ವಿಭಾಗದಿಂದ ವಿಶ್ವ ಒಆರ್‌ಎಸ್ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ ಮಕ್ಕಳಿಗೆ ವಾಂತಿ ಮತ್ತು ಬೇದಿ ಆದಾಗ ಒಆರ್‌ಎಸ್ ದ್ರವವು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆ ಮತ್ತು ಅನೇಕ ಮಕ್ಕಳಿಗೆ ಜೀವದಾನವನ್ನೂ ನೀಡುತ್ತಿದೆ ಎಂದು ತಿಳಿಸಿದರು.

ಮಕ್ಕಳ ವಿಭಾಗದ ಮುಖ್ಯಸ್ಥೆ ಡಾ॥ಸುಧಾರೆಡ್ಡಿ ಒಆರ್‌ಎಸ್‌ನ್ನು ತಯಾರಿ ಮಾಡಿಕೊಳ್ಳುವ ಸುಲಭ ವಿಧಾನ ತಿಳಿಸಿಕೊಟ್ಟರು.

ಉಪ ವೈದ್ಯಕೀಯ ಅಧೀಕ್ಷಕ ಡಾ॥ಕೆ.ದಿನೇಶ್ ಮಾತನಾಡಿ ಆಮಶಂಕೆಯ ವೇಳೆ ಮಕ್ಕಳು ನಿರ್ಜಲೀಕರಣ ಸಮಸ್ಯೆ ಎದುರಿಸುತ್ತವೆ, ಇದು ಮಕ್ಕಳ ಜೀವವನ್ನೇ ಬಲಿ ತೆಗೆದುಕೊಳ್ಳುತ್ತದೆ. ಇಂತಹ ವೇಳೆ ಒಆರ್‌ಎಸ್ ಬೆರೆಸಿದ ನೀರನ್ನು ಕುಡಿಸುವುದರಿಂದ ಮಕ್ಕಳಲ್ಲಿನ ನಿಶ್ಶಕ್ತಿಯನ್ನು ನಿವಾರಿಸಬಹುದು ಎಂದು ವಿವರಿಸಿದರು.

ಮೂಢನಂಬಿಕೆಗಳಿಗೆ ಕಿವಿಗೊಡದೆ ಪೋಷಕರು ಸರಿಯಾದ ಸಮಯದಲ್ಲಿ ಒಆರ್‌ಎಸ್‌ನ್ನು ಮಕ್ಕಳಿಗೆ ಕೊಡುವುದರಿಂದ ಜೀವ ಉಳಿಸಬಹುದು ಎಂದು ಸಲಹೆ ನೀಡಿದರು.

ಸಮುದಾಯ ಆರೋಗ್ಯ ವಿಭಾಗದ ಮುಖ್ಯಸ್ಥ ಡಾ॥ಪ್ರಸನ್ನಕಾಮತ್ ಮಾತನಾಡಿ ಮಕ್ಕಳಿಗೆ ಸರಿಯಾದ ಸಮಯದಲ್ಲಿ ನಿಗದಿತ ಚುಚ್ಚುಮದ್ದು ಕಡ್ಡಾಯವಾಗಿ ಕೊಡಿಸಬೇಕೆಂದರು.

ಮಕ್ಕಳ ವಿಭಾಗದ ಡಾ॥ನರೇಂದ್ರ, ಡಾ॥ವರ್ಷ, ನರ್ಸಿಗ್ ವಿಭಾಗದ ಜಬಮನಿ ಉಪಸ್ಥಿತರಿದ್ದರು.